# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ , ನ್ಯಾಯಾಲಯ ಚಿಂಚೋಳಿ.

ಎಂ.ವಿ.ಸಿ ನಂ. 758/2023

| | | |
|---|---|---|
| ಹೆಸರು | : ಡಾ. ಸ್ಯಾಮುಯಲ್ ಜಯಕುಮಾರ | |
| ತಂದೆಯ ಹೆಸರು | : ರಾಜರತ್ನಂ | |
| ವಯಸ್ಸು | : 51 ವರ್ಷ | |
| ಉದ್ಯೋಗ | : ವೈದ್ಯಾಧಿಕಾರಿಗಳು | |
| ವಾಸ | ಃ ಕಮಲಾಪೂರು | ಆರ್ ಡಬ್ಲ್ಯೂ -1 |

(ಇಂದು ದಿನಾಂಕಃ 31-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಮಾನ್ಯ ಶ್ರೀ VRM ವಕೀಲರಿಂದ ಃ**

ನಾನು ಸಪ್ಟೆಂಬರ 2019 ರಿಂದ ಇಲ್ಲಿಯವರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಕಮಲಾಪೂರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತ ಇರುತ್ತೇನೆ.

ದಿನಾಂಕ 09-12-2022 ರಂದು ಅಪಘಾತದ ಹಿನ್ನೆಲೆಯಲ್ಲಿ ಆದೇಶ ಕುಮಾರ ತಂದೆ ನಾಥುರಾಮ ರಾಥೋಡ ಎಂಬುವವರನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆ ತಂದಾಗ ಆತನನ್ನು ಪರಿಶೀಲಿಸಿದಾಗ ಆಸ್ಪತ್ರೆಗೆ ದಾಖಲಿಸುವ ಮುನ್ನವೇ ಆತನು ಅಪಘಾತದಿಂದ ಮರಣ ಹೊಂದಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ನಮ್ಮ ಆಸ್ಪತ್ರೆಯಲ್ಲಿ ದಾಖಲಾತಿಯಾಗಿರುತ್ತದೆ. ಆದರೆ ಕಣ್ತಪ್ಪಿನಿಂದ (Over-site) ಆ ದಾಖಲಾತಿಯಲ್ಲಿ ರಸ್ತೆ ಸಂಚಾರ ಅಪಘಾತ (RTA) ಎಂದು ಮತ್ತು ಆತನ ದೇಹದ ಮೇಲೆ ಆದ ಗಾಯದ ಬಗ್ಗೆ ನಮೂದು ಮಾಡಿರುವುದಿಲ್ಲ. ಆದರೆ ಮೃತ ವ್ಯಕ್ತಿಯ ನಾನು ಪರಿಶೀಲಿಸಿದಾಗ ರಸ್ತೆ ಸಂಚಾರ ಅಪಘಾತದಿಂದ ಮರಣ ಹೊಂದಿರುವುದು ನನಗೆ ಕಂಡು ಬಂದಿರುತ್ತದೆ.

ಸಾಕ್ಷಿಯು ಆಸ್ಪತ್ರೆಯ ದಾಖಲಾತಿಯ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಆರ್-1(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ- ಅರ್ಜಿದಾರರ ಪರ ಮಾನ್ಯ ವಕೀಲರಿಂದಃ</u>**

ಆದೇಶ ಕುಮಾರ ತಂದೆ ನಾಥುರಾಮ ರಾಥೋಡರವರನ್ನು ನಮ್ಮ ಆಸ್ಪತ್ರೆಗೆ ಪ್ರಥಮ ಚಿಕಿತ್ಸೆಗಾಗಿ ಕರೆ ತಂದಾಗ ಆತನು ರಸ್ತೆ ಸಂಚಾರ ಅಪಘಾತದಿಂದ ಮೃತ ಪಟ್ಟಿರುವುದು ನಾನು ಪರಿಶೀಲಿಸಿದಾಗ ಕಂಡು ಬಂದಿರುತ್ತದೆ ಎಂದರೆ ಸರಿ. ಆ ಬಗ್ಗೆ ಕಣ್ತಪ್ಪಿನಿಂದ ನಿ.ಆರ್-1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲಃ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.